

# ಜೀವನವೇ ಸಂಗೀತ; ಪಿಟೀಲಿನೊಂದಿಗೆ ರಾಗಾಲಾಪ..

ಪಿಟೀಲಿನಲ್ಲಿ ಮೈಸೂರು ಮಹದೇವಪ್ಪ ಅವರದು ಅನುಪಮ ಸಾಧನೆ. ಗಾಯನದ ಜತೆಗೆ ಪಿಟೀಲು ನುಡಿಸಾಣಿಕೆಯಲ್ಲಿ ಪಾರಂಗತರಾದದ್ದಲ್ಲದೆ ತಮ್ಮ ಮಕ್ಕಳನ್ನೂ ಈ ತಂತಿವಾದ್ಯದಲ್ಲಿ ಜಗದ್ವಿಖ್ಯಾತರನ್ನಾಗಿ ಮಾಡಿದ ಇವರ ಸಾಧನೆ ಬೆಲೆ ಕಟ್ಟಲಾಗದ್ದು.

■ ಗೀತಾ ಶ್ರೀನಿವಾಸನ್

ಮೈಸೂರಿನ ಕುವೆಂಪು ನಗರದಲ್ಲೊಂದು ಮನೆ. ಆ ಮನೆಯ ಗೇಟ್ ತೆಗೆದು ಒಳ ಬಂದರೆ, ಎಲ್ಲೆಲ್ಲೂ ಸಂಗೀತದ ಗುಂಗು. ತಾನು ಹಾಡಲು, ವಯೊಲಿನ್ ನುಡಿಸಲು ಕಲಿತು, ತನ್ನಿಬ್ಬರು ಮಕ್ಕಳು, ಮೊಮ್ಮಗ, ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಕರಾಗಿ, ಸಾವಿರಾರು ವಿದ್ಯಾರ್ಥಿಗಳಿಗೆ ವಯೊಲಿನ್ ಕಲಿಸಿದ ನೆನಪುಗಳು, ಇವೆಲ್ಲಾ ಮೈಸೂರು ಮಹದೇವಪ್ಪನವರ ಮನೆಯಲ್ಲಿ, ಮನದಲ್ಲಿ, ಜೀವಂತವಾಗಿದೆ.

'ಅದ್ರೂ, ಮೊದಲು, ವಯೊಲಿನ್ನು ಹಾರ್ಮೋನಿಯಮ್ ಥರ ಇತ್ತು. ಅದು ಏನೂಂದ್ರೆ, ಗಮಕವಿಲ್ಲದ ಸಂಗೀತ. ಸ ರಿ ಗ ಮ ಪ ದ ನಿ ಸ... ಹೀಗಿತ್ತು. ಅದನ್ನ ಪ್ರಯೋಗ ಮಾಡಿದ ಮೇಲೆ, ಸಾ ರೀ ಗಾ ಮಾ... ಹೀಗಾಯ್ತು. ನ ಂಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಬಂದಿದ್ರಿಂದ ವಯೊಲಿನ್‌ನಲ್ಲಿ ಹೊಸತನ ತರಕ್ಕಾಯ್ತು. ವಯೊಲಿನ್ ಚೆನ್ನಾಗಿ ಬರಬೇಕು ಅಂದರೆ ಒಳ್ಳೆ ಗಾಯಕ ಆಗಿರಬೇಕು. ನಾವು ಒಳ್ಳೆ ಜ್ಞಾನ ಸಂಪಾದನೆ ಮಾಡಿದರೆ, ವಯೊಲಿನ್ ತಾನಾಗೇ ಬರತ್ತೆ' ಎನ್ನುತ್ತಾ ಇಂದಿನ ಸಂಗೀತದ ವಿದ್ಯಾರ್ಥಿಗಳಿಗೆ ಒಂದು ಕಿವಿಮಾತನ್ನೂ ಸೇರಿಸುತ್ತಾರೆ, ಹಿರಿಯ ಸಂಗೀತ ಸಾಧಕ, ವಯೊಲಿನ್ ಕಲಿಸುವುದರಲ್ಲಿ ಹೊಸ ಆವಿಷ್ಕಾರ ಕಂಡುಹಿಡಿದ ಮೈಸೂರಿನ ಮಹದೇವಪ್ಪನವರು.

ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ವಯೊಲಿನ್ ಕಲಿಯುವಲ್ಲಿ ಕಲಿಸುವಲ್ಲಿ ತಮ್ಮ ಜೀವವನ್ನೇ ಮುಡಿಪಾಗಿಸಿಕೊಂಡೇ ಬಂದು ಇಂದು ತಮ್ಮ ಇಳಿವಯಸ್ಸಿನಲ್ಲೂ ಆ ದಿನಗಳನ್ನು ಸಾರ್ಥಕ್ಯಭಾವದಿಂದ ನೆನೆಯುವುದು ಕಂಡರೆ ಇಂದಿನ ಯುವ ಪೀಳಿಗೆಯವರಿಗೆ ಅದು ಮಾದರಿಯೇ ಸರಿ.